ಈ ಯೋಜನೆ ಅಡಿಯಲ್ಲಿ 3 ಗ್ರಂಥಾಲಯಗಳ ಕಾಮಗಾರಿ ಪೂರ್ಣಗೊಂಡಿದ್ದು, ಒಂದು ಗ್ರಂಥಾಲಯದ ಕಾಮಗಾರಿಯನ್ನು ಕರ್ನಾಟಕ ಭೂಸೇನಾ ನಿಗಮಕ್ಕೆ ವಹಿಸಿದ್ದು, ಕಾಮಗಾರಿ ಪ್ರಾರಂಭದ ಹಂತದಲ್ಲಿದೆ. ಉಳಿದ ಒಂದು ಗ್ರಂಥಾಲಯಕ್ಕೆ ಗ್ರಾಮ ಪಂಚಾಯಿತಿಯವರು ನಿವೇಶನ ಒದಗಿಸಿದ ಕೂಡಲೇ ಗ್ರಂಥಾಲಯ ಕಟ್ಟಡದ ನಿರ್ಮಾಣ ಪ್ರಕ್ರಿಯೆ ಪ್ರಾರಂಭಿಸಲಾಗುವುದು.

ಆ) ಶಿವಮೊಗ್ಗ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಬಗ್ಗೆ ಸರ್ಕಾರದಲ್ಲಿ ಪ್ರಸ್ತಾವನೆ ಇರುವುದಿಲ್ಲ.

ಇ) 1999 ರಿಂದ 31–3–2003ರವರೆಗೆ ವ್ಯಯಿಸಲಾದ ಮೊತ್ತ

	ರೂ. ಲಕ್ಷಗಳಲ್ಲಿ
1) ಪುಸ್ತಕಗಳಿಗೆ	21.51
2) ಇನ್ನಿತರ ಸಾಮಗ್ರಿಗಳಿಗೆ	2.69

ಈ) ಪರಿಶೀಲನೆಯಲ್ಲಿದೆ

ಶಿವಮೊಗ್ಗ ನಗರದ ಕೊಳಚೆ ಪ್ರದೇಶಗಳ ಮನೆಗಳಿಗೆ ಹಕ್ಕುಪತ್ರ ನೀಡಲು ನಿಯಮ ರೂಪಿಸುವುದು

3527(3339) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ರೆವಿನ್ಯೂ ಭೂಮಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಭೂ ಪ್ರದೇಶದಲ್ಲಿ ಘೋಷಿತವಾಗಿರುವ ಕೊಳಚೆ ಪ್ರದೇಶಗಳ ನಿವಾಸಿಗಳ ಮನೆಗಳಿಗೆ ಹಕ್ಕುಪತ್ರ ನೀಡುವ ಸಲುವಾಗಿ ಕರ್ನಾಟಕ ಕೊಳಚೆ ನಿರ್ಮೂಲನ (ಅಭಿವೃದ್ಧಿ) ಕಾಯಿದೆಗೆ ತಿದ್ದುಪಡಿ ತರಲಾಗಿದೆಯೇ ; ಹಕ್ಕುಪತ್ರ ವಿತರಿಸಲು ನಿಯಮ ರೂಪಿಸಲಾಗಿದೆಯೆ ;

ಆ) ಮೇಲ್ಕಂಡ ಸರ್ಕಾರಿ ಹಾಗೂ ಸ್ಥಳೀಯ ಸಂಸ್ಥೆಗಳ ಭೂ ಪ್ರದೇಶದಲ್ಲಿ ಇರುವ ಕೊಳಗೇರಿ ನಿವಾಸಿಗಳ ಮನೆಗಳಿಗೆ ಹಕ್ಕುಪತ್ರ ವಿತರಿಸಲು ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು ;

ಇ) ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿ ಖಾಸಗಿ ಒಡೆತನದ ಭೂ ಪ್ರದೇಶದಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು ;

ಈ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ಕಾಯಿದೆಯ ಕಲಂ–17ರ ರೀತ್ಯಾ ಎಷ್ಟು ಖಾಸಗಿ ಭೂಮಿಯನ್ನು ಶಿವಮೊಗ್ಗ ನಗರದಲ್ಲಿ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ :

ಉ) ಈ ಕಾಯಿದೆಯಡಿಯಲ್ಲಿ ನಿಗಧಿಪಡಿಸಿರುವ ಭೂ ಪರಿಹಾರ ನಿಯಮಕ್ಕೆ ತಿದ್ದುಪಡಿ ತರುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ (ವಿವರ ನೀಡುವುದು) ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಹೌದು, ರೂಪಿಸಲಾಗುತ್ತಿದೆ.

ಆ) ನಿಯಮಗಳು ಜಾರಿಯಾದ ಕೂಡಲೇ ಹಕ್ಕುಪತ್ರ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಇ) 15 ಕೊಳಚೆ ಪ್ರದೇಶಗಳು

ಈ) ಶಿವಮೊಗ್ಗ ನಗರದಲ್ಲಿ ಖಾಸಗಿ ಒಡೆತನಕ್ಕೆ ಸೇರಿದ ಕೆಳಕಂಡ 3 ಕೊಳಚೆ ಪ್ರದೇಶಗಳ ಪೈಕಿ ಕ್ರಮ ಸಂಖ್ಯೆ 1 ಮತ್ತು 2 ರ ಕೊಳಚೆ ಪ್ರದೇಶಗಳನ್ನು ಕಲಂ 17ರ ಅಡಿಯಲ್ಲಿ ಸ್ವಾಧೀನ ಪಡಿಸಿಕೊಳ್ಳಲಾಗಿದೆ.

1. ವಿದ್ಯಾನಗರ	3.20 ಎಕರೆ
2. ವೆಂಕಟಾಪುರಬೋವಿ ಕಾಲೋನಿ	0.35 ಎಕರೆ
3. ಅಂಬೇಡ್ಕರನಗರ	0.05 ಎಕರೆ

ಕ್ರಮ ಸಂಖ್ಯೆ 3ರ ಕೊಳಚೆ ಪ್ರದೇಶದ ಭೂ ಸ್ವಾಧೀನದ ಅಂತಿಮ ಅಧಿಸೂಚನೆಯನ್ನು ಸರ್ಕಾರವು ಹೊರಡಿಸಬೇಕಿದೆ.

ಉ) ಇಲ್ಲ, ಆದರೆ ಪ್ರಸ್ತುತ ಕರ್ನಾಟಕ ಕೊಳಚೆ ಪ್ರದೇಶಗಳ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯಿದೆ 1973ರ ಅಧಿನಿಯಮದ ಕಾಯಿದೆ 20 ರಡಿ ಅವಕಾಶವಿರುವಂತೆ ಸ್ವತ್ತು ತೆರಿಗೆಯ 300 ಪಟ್ಟು ದರದ ಮೌಲ್ಯದಲ್ಲಿ ಭೂ ಸ್ವಾಧೀನಪಡಿಸಿಕೊಳ್ಳಲಾಗುತ್ತಿದ್ದು, ಅದರನ್ವಯ ಭೂ ಪರಿಹಾರವನ್ನು ಖಾಸಗಿ ಭೂ ಮಾಲೀಕರಿಗೆ ನೀಡಲಾಗುತ್ತಿದೆ.

ರಾಜ್ಯದಲ್ಲಿನ ಕೊಳಚೆ ಪ್ರದೇಶಗಳ ಅಭಿವೃದ್ಧಿ ಕಾಮಗಾರಿಗಳ ವಿವರ

3528(3340) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1999 ರಿಂದ 2003 ರವರೆಗೆ ವಿವಿಧ ಯೋಜನೆಯಡಿ (ನಿರ್ಮೂಲನ ಜ್ಯೋತಿ ಯೋಜನೆ ಹೊರತುಪಡಿಸಿ) ಕೊಳಚೆ ಪ್ರದೇಶಗಳಲ್ಲಿ ಹಮ್ಮಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳು ಯಾವುವು : (ಕೊಳಚೆ ಪ್ರದೇಶವಾರು ವಿವರ ನೀಡುವುದು) :

ಆ) ಈ ಯೋಜನೆಗಳ ಅಂದಾಜು ಮೊತ್ತ ಎಷ್ಟು ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು):

ಅ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು 1999 ರಿಂದ 2003ರ ವರೆಗೆ ಮಂಡಳಿಯ ಆಯಾಯ ಸಾಲಿನ ಕ್ರಿಯಾ ಯೋಜನೆಯಡಿ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಹಮ್ಮಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳಾದ ರಸ್ತೆ, ಚರಂಡಿ, ಒಳಚರಂಡಿ, ಬೀದಿದೀಪ, ಕುಡಿಯುವ ನೀರು, ಶೌಚಾಲಯ, ಸಮುದಾಯ ಭವನ ಇತ್ಯಾದಿ ವಿವರಗಳನ್ನು ಕೊಳಚೆ ಪ್ರದೇಶವಾರು ಕ್ರಿಯಾ ಯೋಜನೆಯ ಪಟ್ಟಿಯು 141 ಪುಟಗಳಿದ್ದು, ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಆ) ಸದರಿ ಸಾಲಿನಲ್ಲಿ ಸರ್ಕಾರವು ಮಂಡಳಿಗೆ ಬಿಡುಗಡೆ ಮಾಡಲಾದ ಅನುದಾನದ ಲಭ್ಯತೆಯ ಆಧಾರದ ಮೇಲೆ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಇದರ ಆಧಾರದ ಮೇಲೆ ಕಾಮಗಾರಿ ಅನುಷ್ಠಾನಗೊಳಿಸಲಾಗುತ್ತಿದೆ. ಯೋಜನೆಯ ಮೊತ್ತ ಈ ಕೆಳಗಿನಂತೆ ಇರುತ್ತದೆ.

ಕ್ರ.ಸಂ.	ವರ್ಷ	ಅಂದಾಜು ಮೊತ್ತ
1.	1999–2000	1000.50
(ಎನ್.ಎಸ್.ಡಿ.ಪಿ.ಯ 287 ಲಕ್ಷ ಸೇರಿ)		
2.	2000–2001	579.50
3.	2001–2002	527.00
4.	2002–2003	718.50